**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 17-02-2020**

**ಪಾಟೀ ಸವಾಲು – 5ನೇ ಪ್ರತಿವಾದಿ ಪರ ವಕೀಲರಿಂದ**

13) 1ನೇ ಪ್ರತಿವಾದಿ ನನ್ನ ತಂದೆ. 1ನೇ ಪ್ರತಿವಾದಿ ನನ್ನ ತಂದೆ ಎಂದು ತೋರಿಸುವ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ನನ್ನ ತಂದೆ ದಾವಾ ಆಸ್ತಿ ಮಾರಾಟ ಮಾಡಿರುವ ವಿಚಾರ ಗೊತ್ತಾಗಿ ದಾಖಲಾತಿ ಪಡೆದು ವಿಭಾಗಕ್ಕಾಗಿ ದಾವೆ ಹಾಕಿರುತ್ತೇನೆ. ದಾವಾ ಆಸ್ತಿಯ ಸರ್ವೆ ನಂ.26. ಅದು ಒಟ್ಟು 2 ಎಕರೆ 30 ಗುಂಟೆ ಇದೆ. ದಾವಾ ಆಸ್ತಿಯ ಪೂರ್ವಕ್ಕೆ ವೆಂಕಟರಾಮಯ್ಯ ಮತ್ತು ಬಚ್ಚೇಗೌಡ ಇವರ ಜಮೀನು ಪಶ್ಚಿಮಕ್ಕೆ ಆಂಜಿನಪ್ಪನ ಜಮೀನು, ಉತ್ತರಕ್ಕೆ ಸರ್ಕಾರಿ ಕಾಲುವೆ ಮತ್ತು ದಕ್ಷಿಣಕ್ಕೆ ಗ್ರಾಮಠಾಣಾ ಇದೆ. 1ನೇ ಪ್ರತಿವಾದಿಗೆ ಒಟ್ಟು ನಾಲ್ಕು ಜನ ಮಕ್ಕಳು, ಅವರೆಂದರೆ ವಾದಿಗಳು ಮತ್ತು ಪ್ರತಿವಾದಿ 2 ಮತ್ತು 3.

14) ದಾವಾ ಆಸ್ತಿ ನಮ್ಮ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ದಾವಾ ಆಸ್ತಿಯನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ. ಅವರ ಹೆಸರು ರಾಮಯ್ಯ. ವಾದ ಪತ್ರದಲ್ಲಿ ಈ ವಿಚಾರ ಹೇಳಿಲ್ಲ, ಈ ಬಗ್ಗೆ ಯಾವುದೇ ಕಾರಣ ಇರುವುದಿಲ್ಲ.

15) ನಾನು ವ್ಯವಸಾಯ ಮಾಡುತ್ತೇನೆ. ನಾವೆಲ್ಲಾ ಒಟ್ಟು ಕುಟುಂಬಕ್ಕಾಗಿ ದುಡಿಯುತ್ತಿದ್ದೆವು. ನನ್ನ ತಂದೆ ವ್ಯವಹಾರ ಸರಿಯಾಗಿ ಮಾಡುತ್ತಿರಲಿಲ್ಲ, ಆದ್ದರಿಂದ ಅವರಿಗೆ ಕೆಟ್ಟ ಚಟ ಇತ್ತು ಎಂದು ಹೇಳಿರುತ್ತೇನೆ. 1ನೇ ಪ್ರತಿವಾದಿಗೆ ಕೆಟ್ಟ ಚಟ ಮತ್ತು ದುರಭ್ಯಾಸ ಇದ್ದ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿ ಹಾಜರು ಪಡಿಸಿಲ್ಲ ಎಂದರೆ ಸರಿ. 1ನೇ ಪ್ರತಿವಾದಿಯೇ ಕುಟುಂಬದ ಎಲ್ಲಾ ವ್ಯವಹಾರ ನೋಡಿಕೊಳ್ಳುತ್ತಿದ್ದರು

ಮತ್ತು ಖರ್ಚು ನಿಭಾಯಿಸುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಯ ಖಾತೆ ಅವರ ಹೆಸರಿನಲ್ಲಿತ್ತು ಎಂದರೆ ಸರಿ. ದಾವಾ ಆಸ್ತಿಯಲ್ಲಿ ಭಾಗ ಕೊಡಿ ಎಂದು ನಾನು 1ನೇ ಪ್ರತಿವಾದಿಯ ಜೊತೆ ಪತ್ರ ವ್ಯವಹಾರ ಮಾಡಿರುವುದಿಲ್ಲ. 1998 ರಲ್ಲಿ ಊರಿನಲ್ಲಿ ಈ ಬಗ್ಗೆ ಪಂಚಾಯ್ತಿ ಮಾಡಿರುತ್ತೇನೆ. ಪಂಚಾಯ್ತಿ ಮಾಡಿದವರು ಈಗ ಯಾರೂ ಇಲ್ಲಾ. ಅವರೆಂದರೆ ಚಿಕ್ಕಮುನಿಶಾಮಪ್ಪ, ಮುನಿವೆಂಕಟಪ್ಪ ಮತ್ತು ಕೃಷ್ಣಮೂರ್ತಿ. ವಾದ ಪತ್ರದಲ್ಲಿ ದಾವಾ ಹಾಕುವ 6 ತಿಂಗಳ ಮೊದಲು ಭಾಗ ಕೊಡಿ ಎಂದು ಕೇಳಿರುವ ಅಂಶ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಪಂಚಾಯಿತಿಯಲ್ಲಿ ಯಾವುದೇ ಭಾಗ ಆಗಿರುವುದಿಲ್ಲ.

16) ದಿ.28-12-1998 ರ ಪಂಚಾಯಿತಿಯಲ್ಲಿ ಯಾವುದೇ ಭಾಗ ಆಗಿರುವುದಿಲ್ಲ. 5ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಈ ಬಗ್ಗೆ ಕನ್ನಡ ಪ್ರಭ ಮತ್ತು ಇಂಡಿಯನ್ ಎಕ್ಸ್‌ಪ್ರೆಸ್ ಇಂಗ್ಲೀಷ್ ದಿನಪತ್ರಿಕೆಯಲ್ಲಿ ಜಾಹೀರಾತು ನೀಡಿದ ಬಗ್ಗೆ ನನ್ನ ಗಮನಕ್ಕೆ ಬಂದಿರುವುದಿಲ್ಲ. 4ನೇ ಪ್ರತಿವಾದಿ ನನ್ನ ಸಂಬಂಧಿಕರಲ್ಲ. ನಾನು ಮತ್ತು ಅವರು ಒಂದೇ ಜಾತಿಗೆ ಸೇರಿದವರು. 4ನೇ ಪ್ರತಿವಾದಿ 2ನೇ ಪ್ರತಿವಾದಿಯ ಸಹಿ ಮಾಡಿದ್ದ ಕಾರಣ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿದ್ದೇನೆ. ನಾನು 4ನೇ ಪ್ರತಿವಾದಿಯ ವಿರುದ್ಧ ಕ್ರಿಮಿನಲ್ ಕೇಸು ಹಾಕಿರುತ್ತೇನೆ ಮತ್ತು ಅದು ನಡೆಯುತ್ತಿದೆ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ನ್ಯಾಯಾಲಯ ಈಗಲೂ ಯಾವುದೇ ತೀರ್ಮಾನ ನೀಡಿರುವುದಿಲ್ಲ. ಈ ದಾವೆ ಹೂಡುವ ಸಲುವಾಗಿ ಈ ರೀತಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಯನ್ನು ಈ ಬಗ್ಗೆ ಕೇಳಿದ್ದೆ, ಅವರು ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ, ಆದ್ದರಿಂದ ನಾನೇ ತೆಗೆದುಕೊಂಡಿದ್ದೇನೆ. 2ನೇ ಪ್ರತಿವಾದಿ ಕ್ರಮ ತೆಗೆದುಕೊಂಡಿಲ್ಲದ ಕಾರಣ ಅವರ ಸಹಿಯನ್ನು ಫೋರ್ಜರಿ ಮಾಡಿದ್ದಾರೆ

ಎಂಬ ಅಂಶ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. 4ನೇ ಪ್ರತಿವಾದಿ 2ನೇ ಪ್ರತಿವಾದಿಯ ಹೆಸರಿನಲ್ಲಿ ಸಹಿ ಮಾಡಿರುತ್ತಾರೆ. 4ನೇ ಪ್ರತಿವಾದಿಯೇ 2ನೇ ಪ್ರತಿವಾಯ ಸಹಿ ಮಾಡಿದ್ದಾರೆ ಎಂದ ದಾಖಲಾತಿಯಲ್ಲಿ ಫೋಟೋ ನೋಡಿ ಗೊತ್ತಾಗಿರುತ್ತದೆ. ನಿ.ಪಿ.2 ದಾಖಲಾತಿಯಾದ 8 ದಿನಗಳ ನಂತರ ಈ ದಾಖಲಾತಿಯ ಬಗ್ಗೆ ನಮ್ಮ ಗಮನಕ್ಕೆ ಬಂದಿರುತ್ತದೆ. ಸಾಕ್ಷಿಗೆ ನಿ.ಪಿ.2 ನ್ನು ತೋರಿಸಿ ಮುನಿನಾರಾಯಣಪ್ಪ ಇವರನು ್ನಗುರುತಿಸಲು ಕೋರಿದಾಗ ಅವರ ನಿ.ಪಿ.2 ದಾಖಲಾತಿಯ ಪುಟ ಸಂಖ್ಯೆ 4 ರಲ್ಲಿರುವ ವೆಂಕಟರೆಡ್ಡಿ ಎಂಬ ವ್ಯಕ್ತಿಯ ಹೆಸರಿನ ಪಕ್ಕದಲ್ಲಿರುವ ಭಾವ ಚಿತ್ರದಲ್ಲಿರುವ ವ್ಯಕ್ತಿ 4ನೇ ಪ್ರತಿವಾದಿ ಎಂದು ಗುರುತಿಸಿರುತ್ತಾರೆ. ಸದರಿ ಭಾವ ಚಿತ್ರವನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಕ್ರಯಪತ್ರ ಆಗಿರುವ ಬಗ್ಗೆ ಮಧ್ಯವರು ಹೇಳಿರುತ್ತಾರೆ, ಅವರ ಹೆಸರು ಹೇಳಲು ಆಗುವುದಿಲ್ಲ.

17) ದಾವಾ ಆಸ್ತಿ ಮೂಲತಃ 2 ಎಕರೆ 8 ಗುಂಟೆ ಇತ್ತು. ದಾವಾ ಆಸ್ತಿಯಲ್ಲದ ನಮ್ಮ ಒಟ್ಟು ಕುಟುಂಬಕ್ಕೆ ಬೇರೆ ಆಸ್ತಿಗಳು ಇವೆ. ಬೇರೆ ಒಟ್ಟು ಕುಟುಂಬದ ಆಸ್ತಿಗಳನ್ನೂ ಸಹ ಈ ದಾವೆಯಲ್ಲಿ ಸೇರಿಸಿದ್ದೆವು, ಆನಂತರ ಅದರ ಬಗ್ಗೆ ರಾಜೀ ಮಾಡಿಕೊಂಡಿರುತ್ತೆವೆ. ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ 5ನೇ ಪ್ರತಿವಾದಿ ರಾಜೀ ಮಾಡಿಕೊಳ್ಳಲಿ ಎಂದು ಅವರ ಮೇಲೆ ಈ ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ಕುಟುಂಬದ ನಿರ್ವಹಣೆಗಾಗಿ ಮತ್ತು ಸಾಲ ತೀರಿಸಲು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ಸಾಲ ಮಾಡಿದ ಬಗ್ಗೆ ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಕುಟುಂಬದ ನಿರ್ವಹಣೆಗಾಗಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ಕಾರಣ ನಮಗೆ ಅದರ ಮೇಲೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ, ದಾವಾ ಆಸ್ತಿಯ ಸ್ವಾಧೀನ 5ನೇ ಪ್ರತಿವಾದಿಯ ಬಳಿ

ಇದೆ ಎಂದರೆ ಸರಿಯಲ್ಲ. ಈ ಬಗ್ಗೆ ಪಹಣಿ ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ನನ್ನ ಬಳಿ ದಾವಾ ಆಸ್ತಿಯ ಸ್ವಾಧೀನ ಇದೆ ಎಂದು ತೋರಿಸಲು ದಾಖಲಾತಿ ಕೊಟ್ಟಿಲ್ಲ, ಆದರೆ ಸ್ವಾಧೀನದಲ್ಲಿ ಇದ್ದೇನೆ. ದಾವಾ ಆಸ್ತಿಯಿಂದ ಯಾವುದಾದರೂ ಆದಾಯ ಬರಲಿ ಎಂಬ ದುರುದ್ದೇಶದಿಂದ ನಾನು ಮತ್ತು ಇತರ ಪ್ರತಿವಾದಿಗಳು ಸೇರಿ ಈ ಸುಳ್ಳು ದಾವೆ ಮಡಿದ್ದೇವೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಸುಳ್ಳು ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರು ಮಾಡಿರುವ ದಾಖಲಾತಿಗಳು ಸೃಷ್ಟಿ ಮಾಡಿಕೊಂಡಿರುವ ದಾಖಲಾತಿಗಳು ಎಂದರೆ ಸರಿಯಲ್ಲ. 5ನೇ ಪರತಿವಾದಿ ಒಬ್ಬ ಬೋನಫೈಡೆ ಪರ್ಚೇಸರ್ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಲಾಯಿತು).

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**